# ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ..



ಮಕ್ಕಳು ಚೆನ್ನಾಗಿ ಕಲಿತು ಉನ್ನತ ಉದ್ಯೋಗ ಹಿಡಿದು ವಿದೇಶಕ್ಕೆ ಹೋಗುತ್ತಾರೆ. ಆಗ ಹೆತ್ತವರಿಗೆ ಒಂಟಿತನ ಕಾಡುತ್ತದೆ. ಕೆಲವು ಹೆತ್ತವರು ಮಕ್ಕಳನ್ನು ವಿದೇಶಕ್ಕೆ ಹೋಗಬೇಡಿ ಎಂದು ತಡೆಯುವವರೂ ಇದ್ದಾರೆ. ಇದು ಹಾರುವ ಹಕ್ಕಿಯ ರೆಕ್ಕೆ ಕತ್ತರಿಸಿದಂತೆ ಅನ್ನಿಸುತ್ತದೆ. ಹಿರಿಯವರು ಒತ್ತಡ ಹೇರುವ ಬದಲು ಬದುಕಿನಲ್ಲಾದ ಬದಲಾವಣೆಗೆ ಒಗ್ಗಿಕೊಳ್ಳುವ ಪ್ರಯತ್ನ ಮಾಡಿಕೊಳ್ಳಬಹುದಲ್ಲವೆ?

■ ಸವಿತಾ ಶಾಂತಪ್ರಿಯ

**ದೃಶ್ಯ 1:** ಪುಟ್ಟ ಮನೆ. ಪತಿ ಪತ್ನಿ ಇಬ್ಬರೂ ಹೊರಗೆ ದುಡಿಯುವವರು. ಇಬ್ಬರು ಪ್ರತಿಭಾವಂತ ಮಕ್ಕಳು. ಸದಾ ಓದು ಪರೀಕ್ಷೆ ಇದರಲ್ಲೇ ಮುಳುಗಿರುವವರು. ಅವರನ್ನು ಆ ಕೋರ್ಸ್ ಈ ಕೋರ್ಸ್ ಎಂದು ಎಳಕೊಂಡು ಸುತ್ತಾಡಿ ಹಣ ಹೊಂದಿಸುವುದಕ್ಕೆ ಕಷ್ಟಪಟ್ಟು ತಮ್ಮ ಯೌವನವನ್ನೆಲ್ಲ ಮಕ್ಕಳಿಗಾಗಿಯೇ ಮೀಸಲಿಟ್ಟ ದಂಪತಿಗಳು. ಮಕ್ಕಳ ಸಾಧನೆಯನ್ನು ತಮ್ಮದೇ ಸಾಧನೆ ಎಂಬಂತೆ ಬೀಗಿ ಎಂಎನ್ಸಿ ಯಲ್ಲಿ ಕೆಲಸ ಕೊಡಿಸಿ ಮಕ್ಕಳು ವಿಮಾನವೇರಿ ವಿದೇಶಕ್ಕೆ ಹಾರುವುದನ್ನು ನೋಡಿ ಪುಲಕಿತರಾದ ತಂದೆ ತಾಯಿಯರು.

**ದೃಶ್ಯ 2:** ಅದೇ ಪುಟ್ಟ ಮನೆ. ಅದೇ ಜನ. ಆದರೆ ಹಿಂದಿನ ಗಡಿಬಿಡಿ ಓಡಾಟ ಇಲ್ಲ, ತುಂಬ ಪ್ರಶಾಂತ ಸನ್ನಿವೇಶ. ಟಿವಿಯಲ್ಲಿ ಯಾವುದೋ ಕಾರ್ಯಕ್ರಮ ಬಿತ್ತರವಾಗುತ್ತಿದ್ದರೂ ಆ ಕಡೆ ಅತಿಯಾದ ಗಮನವಿಲ್ಲ. 'ನನಗೆ ನೀನು ನಿನಗೆ ನಾನು' ಎಂದುಕೊಂಡು ಜೊತೆಯಾಗಿ ಬಾಳುತ್ತಿರುವ ಹಿರಿಯ ಜೋಡಿ ಹಕ್ಕಿಗಳು. ವಿದೇಶದಲ್ಲಿರುವ ಮಕ್ಕಳ ಯಶಸ್ಸನ್ನು ಕೊಂಡಾಡುತ್ತಾ ಅವನಿಗೆ ಹಂಗಾಯ್ತುರೀ, ಹಿಂಗಾಯ್ತುರೀ ಎಂದು ಸ್ನೇಹಿತರೊಂದಿಗೆ ಹೇಳಿಕೊಳ್ಳುತ್ತಾ, ವಿದೇಶದ ಫೋಟೋಗಳನ್ನು ತೋರಿಸುತ್ತಾ, ಮಕ್ಕಳು ಗಳಿಸುವ ಡಾಲರ್ ಸಂಬಳವನ್ನು ರೂಪಾಯಿ ಲೆಕ್ಕದಲ್ಲಿ ಪರಿವರ್ತಿಸಿ ಡಾಲರ್ ಎದುರು ರೂಪಾಯಿ ಬೆಲೆ ಹೆಚ್ಚಾದಾಗ ಕುಗ್ಗಿ ಇಳಿದಾಗ ಸಂಭ್ರಮಿಸುತ್ತಿರುವ ವೃದ್ಧ ದಂಪತಿಗಳು. ಮಕ್ಕಳಿಂದ ಬರುವ ಅಂತಾರಾಷ್ಟ್ರೀಯ ಕರೆಗಳಿಗಾಗಿ ಕಾದಿರುವ ಅಥವಾ ಸ್ಕೈಪ್‌ನಲ್ಲಿ ಅವರೊಂದಿಗೆ ಮಾತನಾಡಲು ಹವಣಿಸುತ್ತಿರುವ ತಂದೆತಾಯಿಯರು.

* * *

ವಿದೇಶದಲ್ಲಿ ನೆಲೆನಿಂತ ಮಕ್ಕಳು ಸಂಪಾದಿಸತೊಡಗಿದಾಗ ಆ ಹಣವನ್ನು ನಮಗಾಗಿ ಖರ್ಚು ಮಾಡಬೇಡಿರೆಂದು ಹೇಳುತ್ತಾ ಅವರ ಹಣವನ್ನು ಹೂಡಿಕೆಗಳಲ್ಲಿ ಹಾಕುತ್ತಿರುವವರು. ಮಕ್ಕಳು ಮನೆ, ಕಾರು ಎಂದು ಮೈತುಂಬಾ ಸಾಲ ಮಾಡಿಕೊಂಡಾಗ ತಮ್ಮ ಆಸೆ ಆಕಾಂಕ್ಷೆಗಳನ್ನು ಅವರ ಮುಂದೆ ಹೇಳಿಕೊಳ್ಳದೆ ತಮ್ಮ ಫಿಕ್ಸೆಡ್ ಡೆಪಾಸಿಟ್, ಪಿಎಫ್ ಎಂದು ಖರ್ಚು ಮಾಡಿಕೊಂಡು ಇರುವವರು. ಅಪರೂಪಕ್ಕೊಮ್ಮೆ ಮಕ್ಕಳಿರುವಲ್ಲಿಗೆ ಹೋದಾಗಲೂ ಅವರು ವೀಕೆಂಡ್ ಎಂದು ಖರ್ಚು ಮಾಡಿದಾಗ ಹೊಟ್ಟೆ ಸುಟ್ಟುಕೊಳ್ಳುವವರು, ಉಳಿಸಿಕೊಳ್ರೋ ಎಂದು ದುಂಬಾಲು ಬೀಳುವವರು ಆ ಹಿರಿಯರು.

ಈ ಎರಡೂ ದೃಶ್ಯಗಳಲ್ಲೂ ಹಿರಿಯರು ಕಷ್ಟಜೀವಿಗಳು. ಮಕ್ಕಳಿಗಾಗಿ ತಮ್ಮೆಲ್ಲವನ್ನು ಸುರಿದವರು. ಆದರೆ ಕೊನೆಗೆ ಬಯಸಿಯೋ ಬಯಸದೆಯೋ ಮಕ್ಕಳ ದಾರಿ ಕಾಯುತ್ತಾ ಒಬ್ಬಂಟಿಯಾಗಿಯೇ ಇರುವವರು. ಇದು ತಪ್ಪಲ್ಲ. ಇದು ಬದುಕಿನ ಹಾದಿ, ಅದು ಒಯ್ದಲ್ಲಿಗೆ ಹೋಗಲೇಬೇಕು, ಕರೆದಂತೆ ಸಾಗಲೇಬೇಕು. ಹಾಗಂತ ಈ ತಂದೆ ತಾಯಿಯರು ಕಷ್ಟದಲ್ಲಿದ್ದಾರೆಂದೂ ಅಲ್ಲ, ಅಥವಾ ದುಃಖದಲ್ಲಿದ್ದಾರೆಂದೂ ಅಲ್ಲ. ಅವರೂ ಈ ಬದಲಾವಣೆಯನ್ನು ಸಂತೋಷದಿಂದ ಸ್ವೀಕರಿಸಿಯಾಗಿದೆ, ಅದರಿಂದಾಗಿ ತಮ್ಮ ಬದುಕಲ್ಲಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡಾಗಿದೆ. ದೂರದ ಊರಲ್ಲಿ ಮಕ್ಕಳು ಖುಷಿಯಾಗಿರುತ್ತಾರೆ; ಇಲ್ಲಿ ಇವರೂ ಸಂತೋಷದಿಂದಿರುತ್ತಾರೆ.

ಕೆಲವರು ಒಂದು ಬಾರಿ ವಿದೇಶಕ್ಕೆ ಹಾರಿ ಪ್ರವಾಸೀ ತಾಣಗಳನ್ನು ನೋಡಿ ಹಿಂತಿರುಗಿ ಅದೇ ಗುಂಗಿನಲ್ಲಿ ಉಳಿದ ಸಮಯ ಕಳೆಯುತ್ತಾರೆ. ಇನ್ನು ಕೆಲವರು ಆರು ತಿಂಗಳು ಅಲ್ಲಿದ್ದು ಇನ್ನಾರು ತಿಂಗಳು ಊರಿಗೆ ಬಂದು ತನ್ನ ಬಂಧುಬಳಗ ಸ್ನೇಹಿತವರ್ಗದೊಂದಿಗೆ ಖುಷಿಪಟ್ಟು ಮತ್ತೆ ಹೋಗುವ ತಯಾರಿ ಇದರಲ್ಲೆ ಇದ್ದುಬಿಡುತ್ತಾರೆ. ಇನ್ನು ಕೆಲವರು ಮಗಳುಸೊಸೆಯಂದಿರ ಬಾಣಂತನಕ್ಕೆಂದು ವಿದೇಶಕ್ಕೆ ಹಾರಿ ಅಲ್ಲಿ ವರ್ಷಗಳ ಕಾಲ ಇದ್ದು ಮತ್ತೆ ಇಲ್ಲಿ ಬಂದು ನೆಲೆಯೂರುವವರೂ ಇದ್ದಾರೆ. ಮತ್ತೆ ಕೆಲವರು ಅಲ್ಲಿ ಹೋಗಿ ಮಕ್ಕಳೊಂದಿಗೆ ಇದ್ದು ಅಲ್ಲಿನ ವಾತಾವರಣ ಹಿಡಿಸದೆ ಆರೋಗ್ಯ ತೊಂದರೆಯಿಂದಾಗಿ ಹಿಂದಿರುಗಿದವರೂ ಇದ್ದಾರೆ. ಒಟ್ಟಾರೆಯಾಗಿ ನೆಲೆ ಇಲ್ಲಿಯೇ.

ಇನ್ನೊಂದು ಸಣ್ಣ ಘಟನೆ, ಇಲ್ಲಿ ನೆನೆಯಲೇ ಬೇಕು. ಪೂನಾದ ಹಿರಿಯ ನಿವಾಸಿಯೊಬ್ಬರಿಗೆ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗ. ಮಗ ವಿದೇಶದಲ್ಲಿ ಉದ್ಯೋಗದ ನಿಮಿತ್ತ ಇದ್ದರೆ ಮಗಳಂದಿರನ್ನು ವಿದೇಶದ ನಿವಾಸಿಯಾದ ಹುಡುಗರಿಗೇ ದಾರೆಯೆರೆದುಕೊಟ್ಟು ಸಂಭ್ರಮಿಸಿದ್ದಾರೆ. ಕೆಲವು ವರ್ಷಗಳು ಸಂದ ಮೇಲೆ ರಸ್ತೆಯಲ್ಲಿ ಮುಂಜಾನೆ ವಾಕ್ ಮಾಡುತ್ತಿರುವಾಗ ಹಿಂದಿನಿಂದ ಬಂದ ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದಿದೆ. ಆ ಹಿರಿಯರು ಅಲ್ಲೇ ಕುಸಿದಿದ್ದಾರೆ. ಅಲ್ಲಿ ಕಂಡವರು ಅವರನ್ನು ಪಕ್ಕದ ಆಸ್ಪತ್ರೆಗೆ ಕರೆದುಕೊಂಡು ಸೇರಿಸಿದ್ದಾರೆ, ಮನೆಯವರಿಗೆ ಫೋನಾಯಿಸಿದ್ದಾರೆ. ಮಕ್ಕಳಿರುವುದು ವಿದೇಶದಲ್ಲಿ. ಅಲ್ಲಿಂದ ಬರುವುದೆಂದರೆ ತಕ್ಷಣಕ್ಕಾಗುವ ಕೆಲಸವಲ್ಲ. ಕೊನೆಗೆ ಅವರಂತೆಯೆ ಒಂಟಿಯಾಗಿರುವ ವೃದ್ಧರೆ ಅವರ ಸಾಥಿಗಳಾಗಿ ಆಸ್ಪತ್ರೆಯಲ್ಲೂ ಬಳಿಕ ಮನೆಯಲ್ಲೂ ಅವರ ಸೇವೆ ಮಾಡಿದರು. ಆಮೇಲೆ ಮಕ್ಕಳು ದೌಡಾಯಿಸಿದರೆನ್ನಿ. ಆದರೇನು? ಕೆಲವೇ ದಿನಗಳ ಕಾಲ ಅಪ್ಪನೊಂದಿಗಿದ್ದು ಅವರವರ ಕರ್ತವ್ಯದ ನಿಮಿತ್ತ ಹೊರಟಿದ್ದಾರೆ. ಈ ಹಿರಿಯರಿಗೆ ಅವರ ಸ್ನೇಹಿತ ಹಿರಿಯರೇ ಗತಿ.